# ಬೆಟ್ಟದಲ್ಲೊಬ್ಬ ಗಿರಿ ಭಟ್ರು



**ಕರ್ನಾಟಕದಲ್ಲೇ ಅತ್ಯಂತ ಎತ್ತರದ ಕುಮಾರ ಪರ್ವತಕ್ಕೆ ಚಾರಣ ಬರುವವರಿಗೆ ಈ ಭಟ್ಟರು ಅತ್ಯಂತ ಚಿರಪರಿಚಿತ. ಬೆಟ್ಟದ ಮೇಲೆ ಅನ್ನದ ವ್ಯವಸ್ಥೆ ಮಾಡುತ್ತ ಅಲ್ಲಿಯೇ ವಾಸಿಸುವ ಈ ಭಟ್ಟರದ್ದು ನಗರವಾಸಿಗಳಿಗೆ ಕುತೂಹಲದ ಬದುಕು.**

ಚಿತ್ರ– ಲೇಖನ:
**ಸಂತೋಷ್ ರಾವ್ ಪೆರ್ಮುಡ**





**ಕು**ಮಾರ ಪರ್ವತದ ಚಾರಣಿಗರಿಗೆಲ್ಲ ಗುಡ್ಡದ ಮೇಲೆ ಅನ್ನಭಾಗ್ಯ! ಕುಕ್ಕೆ ಸುಬ್ರಹ್ಮಣ್ಯದಿಂದ ಸುಮಾರು ಆರು ಕಿ.ಮೀ ದೂರದ ಗಿರಿಗದ್ದೆ ಎಂಬ ಪ್ರದೇಶದ ಬೆಟ್ಟದಲ್ಲಿ ವಾಸಿಸುವ ಮಹಾಲಿಂಗೇಶ್ವರ ಭಟ್ರು ಬಂದವರಿಗೆ ಅನ್ನದ ವ್ಯವಸ್ಥೆ ಮಾಡುತ್ತಾರೆ. ಚಾರಣ ಪ್ರಿಯರೆಲ್ಲಾ ಇವರು ಗಿರಿ ಭಟ್ರು!

ಇವರ ತಂದೆ ನಾರಾಯಣ ಭಟ್ರು ಸುಮಾರು 40 ವರ್ಷಕ್ಕೂ ಮೊದಲೇ ಈ ಬೆಟ್ಟದಲ್ಲಿ ಬಂದು ನೆಲೆ ನಿಂತವರು. ತಂದೆಯ ಕಾಲಾನಂತರ ಇವರ ಮಕ್ಕಳು ಇಲ್ಲಿ ವಾಸಿಸಲು ಹಿಂಜರಿದು ಪಟ್ಟಣಗಳತ್ತ ತೆರಳಿದರು. ಆದರೆ ಭಟ್ರು ಬೆಟ್ಟ ಬಿಡಲಿಲ್ಲ. ನೆಲೆ ನಿಂತು ಬದುಕನ್ನೇ ರೂಪಿಸಿಕೊಂಡರು.

ಪ್ರಾರಂಭದಲ್ಲಿ ಸುಮಾರು 4–5 ಎಕರೆ ಪ್ರದೇಶದಲ್ಲಿ ಭತ್ತದ ಬೆಳೆಯನ್ನು ಬೆಳೆಯುತ್ತಿದ್ದರಂತೆ. ಕಾಡುಪ್ರಾಣಿಗಳ ಹಾವಳಿಯಿಂದಾಗಿ ಭತ್ತ ಬಿಟ್ಟು ಅಡಿಕೆ ಬೆಳೆಗೆ ಮುಂದಾದರಂತೆ. ಅದರ ಜೊತೆಗೆ ಹೈನುಗಾರಿಕೆಕೂಡ ಇದೆ.

ಕುಮಾರ ಪರ್ವತಕ್ಕೆ ಪ್ರತಿವರ್ಷ ಸುಮಾರು 4 ರಿಂದ 5 ಸಾವಿರ ಮಂದಿ ಚಾರಣಿಗರು ಆಗಮಿಸುತ್ತಾರೆ. ಅನ್ನ ಬೇಕೆನ್ನುವ ಚಾರಣಿಗರಿಗೆ ಈ ಗಿರಿಭಟ್ರು ನೆರವಾಗುತ್ತಾರೆ. ಏಕೆಂದರೆ ಸುಬ್ರಹ್ಮಣ್ಯ ಪಟ್ಟಣವನ್ನು ಬಿಟ್ಟರೆ ಚಾರಣಿಗರಿಗೆ ಆಹಾರ ದೊರೆಯುವ ಏಕೈಕ ಸ್ಥಳವೆಂದರೆ ಈ ಭಟ್ರ ಮನೆಯೇ.

ಚಾರಣಿಗರಿಗೆ ಇವರು ಸಸ್ಯಾಹಾರಿ ಊಟೋಪಚಾರ ಮಾತ್ರ. ಉಳಿದುಕೊಳ್ಳುವ ವ್ಯವಸ್ಥೆಯನ್ನು ಕಡಿಮೆ ದರದಲ್ಲಿ ಮಾಡಿಕೊಡುತ್ತಾರೆ. ಊಟೋಪಚಾರಕ್ಕೆ ಬೇಕಾಗುವ ವಿವಿಧ ಸಾಮಗ್ರಿಗಳನ್ನು ಸುಬ್ರಹ್ಮಣ್ಯ ಪಟ್ಟಣದಿಂದ ತಲೆಯ ಮೇಲೆ ಹೊತ್ತುಕೊಂಡೇ ತರುತ್ತಾರಂತೆ.

ಮಳೆಗಾಲದಲ್ಲಂತೂ ಇಲ್ಲಿನ ದಾರಿ ಆತಂಕಮಯ. ಕಣ್ಣ ಮುಂದಿನ ದಾರಿಯೇ ಕಾಣದಷ್ಟು ಬಿರುಸಾಗಿ ಬೀಳುವ ಭಾರೀ ಮಳೆಯ ಹಾವಳಿ ಒಂದೆಡೆಯಾದರೆ, ಮಂಜಿನ ಹಾವಳಿಯು ಇನ್ನೊಂದೆಡೆ. ಈ ದಾರಿಯಲ್ಲಿ ನಡೆಯುವಾಗ ಎದುರುಗಡೆ ಆನೆ ಬಂದು ನಿಂತರೂ ಕಾಣಿಸದಷ್ಟು ದಾರಿಯು ಮಬ್ಬಾಗಿ ಅಪಾಯಕಾರಿಯೂ ಹೌದು. ಹೀಗೆ ದಿನಂಪ್ರತಿ ಬೆಟ್ಟದ ಹಾದಿಯನ್ನು ಸವೆಸುವ ಗಿರಿ ಭಟ್ರು ಚಾರಣಿಗರ ಪಾಲಿನ ಆಪದ್ಬಾಂಧವ.

ಬೆಟ್ಟದಲ್ಲಿ ಭಟ್ರ ವಾಸಕ್ಕೆ ತಕರಾರು, ಅಪಹಾಸ್ಯ ಇತ್ತು. ಅದರೆ ಇಂದು ಇವರೇ ಚಾರಣಪ್ರಿಯರ ಪ್ರೀತಿಯ ಗಿರಿಭಟ್ರಾಗಿ ಮಾರ್ಗದರ್ಶಕರೂ ಆಗಿದ್ದಾರೆ! ಈ ಅರಣ್ಯ ಪ್ರದೇಶದಲ್ಲಿ ಕೃಷಿಗೆ ಭೂಮಿ, ವಾಸಕ್ಕೆ ಮನೆ ಮಾಡಿಕೊಂಡು ನೆಮ್ಮದಿಯಾಗಿದ್ದಾರೆ. ಇಂಥ ಬದುಕು ನಿಜಕ್ಕೂ ಕುತೂಹಲ ಕೆರಳಿಸುತ್ತದೆ.